ಮಾಡಿ ನೋಡಿದೆ. ಆ ಪ್ಯಾಕೆಟಿನಲ್ಲಿ ನಾನು ನೀನಾಳ ಮನೆಯಲ್ಲಿ ಬಿಟ್ಟು ಬಂದಿದ್ದ ನನ್ನ ಹಳೆಯ ಬಟ್ಟೆಗಳು ಮತ್ತು ಇನ್ನಿತರ ಚಿಕ್ಕ ಪುಟ್ಟ ವಸ್ತುಗಳಿದ್ದವು. ನಾನು ಆ ಪ್ಯಾಕೆಟನ್ನು ತೆಗೆದುಕೊಂಡೆ. ಅದು ನನ್ನ ನಿಧಿಯಾಗಿತ್ತು.

ಹತ್ತು ಗಂಟೆಗೆ ಜನ ಬರಲಾರಂಭಿಸಿದರು. ಅವರು ತಮಗೆ ಬೇಕಾದುದನ್ನು ಖರೀದಿಸಿದರು. ಸಂಜೆ ನಾಲ್ಕು ಗಂಟೆಯವರೆಗೆ ಕೆಲವು ಸಾಮಾನುಗಳನ್ನು ಮಾರಲಾಯಿತು. ಐದು ಗಂಟೆಗೆ ಒಂದು ಟ್ರಕ್ ಬಂತು. ಅದರಲ್ಲಿ ಮಾರಾಟವಾಗದ ಸಾಮಾನುಗಳನ್ನು ಹೇರಿ, ಅವುಗಳನ್ನು ದಾನ ಮಾಡಲು ರೆಡ್‌ಕ್ರಾಸ್ ಮತ್ತು ಇನ್ನಿತರ ಧರ್ಮಾರ್ಥ ಸಂಸ್ಥೆಗಳಿಗೆ ತೆಗೆದುಕೊಂಡು ಹೋಗಲಾಯಿತು.

ನಾನು ಶೀಲಾ ದೇವಿಯವರಿಗೆ ಮನೆಯನ್ನು ಖಾಲಿ ಮಾಡಲು ಓರ್ವ ಕೂಲಿಯಂತೆ ಸಹಾಯ ಮಾಡಿದೆ. ಆ ವಸ್ತುಗಳನ್ನೆಲ್ಲಾ ಏನು ಮಾಡುವುದು ಎಂದು ತೀರ್ಮಾನಿಸುವುದು ಶೀಲಾ ದೇವಿಯವರಿಗೆ ಸೇರಿತ್ತು. ಹಾಂ, ನಾನು ನೀನಾಳ ಕಾರನ್ನು ಖರೀದಿಸಿದೆ, ಅದರ ಸಂಪೂರ್ಣ ಬೆಲೆಯನ್ನು ಶೀಲಾ ದೇವಿಯವರಿಗೆ ಕೊಟ್ಟೆ. ನನ್ನಿಡೀ ದಿನವನ್ನು ನೀನಾಳ ವಸ್ತುಗಳನ್ನು ಮಾರಲು, ದಾನ ಮಾಡಲು ಮತ್ತು ಮನೆಯನ್ನು ಖಾಲಿ ಮಾಡುವಲ್ಲಿ ಕಳೆದಿದ್ದೆ. ನಂತರ ಟ್ರಕ್‌ಗೆ ಸಾಮಾನುಗಳನ್ನು ಹೇರಿ ತುಂಬಾ ದಣಿದಿದ್ದೆ. ರಾಮಚಂದ್ರರು ಮತ್ತು ಶೀಲಾ ದೇವಿ ಶ್ರೀಮಂತರಾಗಿದ್ದರೂ ತುಂಬಾ ಜಿಪುಣರಾಗಿದ್ದರು.

ಸಾಮಾನುಗಳನ್ನೆಲ್ಲಾ ಟ್ರಕ್‌ಗೆ ತುಂಬಿದಾಗ ನಾನು ಹೊರಳಿ ನೀನಾಳ ಮನೆಯನ್ನು ನೋಡಿದೆ. ಮನೆ ಸಂಪೂರ್ಣವಾಗಿ ಖಾಲಿಯಾಗಿದ್ದು, ಈಗ ಅದನ್ನು ಗುರುತಿಸುವುದು ಕಷ್ಟವಾಗುತ್ತಿತ್ತು.

‘ಪಾಲ್ ತೆಗೆದುಕೊ’, ಶೀಲಾ ದೇವಿಯವರು ನನ್ನ ಬಳಿಗೆ ಬಂದು ಕಾರಿನ ಕೀಯನ್ನು ನನಗೆ ಕೊಟ್ಟರು. ‘ತುಂಬಾ ತುಂಬಾ ಥ್ಯಾಂಕ್ಸ್ ಪಾಲ್’, ಅವರು ತುಂಬಿದ ಕಣ್ಣುಗಳಿಂದ ನನಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ನಾನು ಶೀಲಾ ದೇವಿಯವರನ್ನು ಅಭಿನಂದಿಸಿ ಕಾರಿನ ಸಮೀಪಕ್ಕೆ ಹೋದೆ. ಕಾರಿನ ಬಾಗಿಲನ್ನು ತೆರೆದು ಹಿಂದಿನ ಸೀಟಿನಲ್ಲಿ ಪ್ಯಾಕೆಟ್ ಇಟ್ಟೆ. ನಂತರ ಕಾರ್ ಸ್ಟಾರ್ಟ್ ಮಾಡಿ ನನ್ನ ಮನೆಯೆಡೆಗೆ ಹೊರಟೆ.

ಆ ಪ್ಯಾಕೆಟನ್ನು ನಾನೆಂದೂ ತೆರೆಯಲಿಲ್ಲ. ಇಂದಿಗೂ ಸಹ ಅದು ನನ್ನ ಬೀರುವಿನಲ್ಲಿ ಹಾಗೆಯೇ ಇದೆ. ಪ್ಯಾಕೆಟಿನೊಳಗಿರುವ ವಸ್ತುಗಳು ಬೆಲೆಬಾಳುವಂಥದ್ದಲ್ಲ, ಅವುಗಳ ಅವಶ್ಯಕತೆ ನನಗಿಲ್ಲ ಎಂಬುದು ನನಗೆ ತಿಳಿದಿದೆ. ಆದರೆ ಪ್ಯಾಕೆಟಿನ ಮೇಲೆ ನೀನಾ ತನ್ನ ಕೈಯಾರೆ ಬರೆದ ನನ್ನ ಹೆಸರು ‘ಪಾಲ್’ ನನಗೆ ತುಂಬಾ ಬೆಲೆಯುಳ್ಳದ್ದಾಗಿದೆ. ಅದನ್ನು ನಾನೆಂದೂ ಕಳೆದುಕೊಳ್ಳಲು ಬಯಸುವುದಿಲ್ಲ.

ನಾನು ತಲೆಯೆತ್ತಿ ಆಗಸವನ್ನು ನೋಡಿದೆ. ಮೆಲ್ಲನೆ ಬೆಳಕಾಗುತ್ತಿದೆ. ಅಂದರೆ ಭೂಮಿ ತನ್ನ ಕಕ್ಷೆಯಲ್ಲಿ ಪೂರ್ಣವಾಗಿ ಹೊರಳಿದೆ. ಜಗತ್ತು ಮೆಲ್ಲ ಮೆಲ್ಲನೆ ಮತ್ತೆ ಬೆಳಕಾಗುತ್ತಿದೆ. ನಾನು ಆನಂದಿತನಾದೆ. ನಾನು ಮೊದಲ ಬಾರಿಗೆ ಹಗಲು ಕಳೆಯುವುದನ್ನು, ಅಂಧಕಾರ ಆವರಿಸುವುದನ್ನು, ಸೂರ್ಯ ಹುಟ್ಟುವುದನ್ನು ಮತ್ತು ಎಲ್ಲೆಡೆ ಬೆಳಕು ಪಸರಿಸುವುದನ್ನು ನೋಡಿದೆ. ಸೃಷ್ಟಿ ಅದೆಷ್ಟು ನಿಯಮಬದ್ಧವಾಗಿದೆ. ಎಲ್ಲವೂ ಒಂದು ಕಠಿಣ ಶಿಸ್ತಿನಲ್ಲಿ ನಡೆಯುತ್ತದೆ. ಸ್ವಲ್ಪ ಪ್ರಮಾಣದಲ್ಲೂ ಅತ್ತ ಇತ್ತವಾದರೆ ಎಲ್ಲವೂ ಸರ್ವನಾಶ. ಪ್ರಾತಃಕಾಲ ಅದ್ಭುತ ತಾಜಾತನದಿಂದ, ಮಧ್ಯಾಹ್ನ ಕಂಪಿಸುವಂತೆ, ಸಂಜೆ ಸುಂದರವಾಗಿ, ರಾತ್ರಿ ಒಮ್ಮೆ ಸುಂದರ ಮತ್ತು ಒಮ್ಮೆ ಭಯಾನಕ. ಹೀಗೆ ನಾನು ಪ್ರಕೃತಿ ಬೇರೆ ಬೇರೆ ಜಾವದಲ್ಲಿ ಬೇರೆ ಬೇರೆಯಾಗಿ ಗೋಚರಿಸುತ್ತದೆ ಎಂಬುದನ್ನು ಮನಗಂಡೆ.

***

ನಾನು ರಿಂಗಸ್ಟೆಡ್ ಪ್ರದೇಶವನ್ನು ಸಂಪೂರ್ಣವಾಗಿ ದಾಟಿ ಹೋದೆ. ಈಗ ಫೆನ್ಸ್‌ಮಾರ್ಕ್ ಬಂದಿದೆ, ಅಂದರೆ ನಾನು ನೂರಾ ಒಂದು ಕಿ.ಮೀ. ನಡೆದಿದ್ದೇನೆ. ಈಗ ಕೇವಲ ಏಳು ಕಿ.ಮೀ. ಮಾತ್ರ ಉಳಿದಿದೆ. ಕಾಲುಗಳು ಮುಂದೆ ಸಾಗುತ್ತಿಲ್ಲ. ಚಪ್ಪಲಿಗಳು ಹರಿದು ಹೋಗುತ್ತಿವೆ. ಅದೆಷ್ಟೋ ಬಾರಿ ಬರಿಗಾಲಿನಲ್ಲಿ ನಡೆದಿದ್ದೇನೆ.

ನಾನು ಹೇಗೋ ಮುಂದುವರೆದು ಹೋಗುತ್ತಿದ್ದೇನೆ. ಇದು ನನ್ನ ತೀರ್ಥಯಾತ್ರೆಯಾಗಿದೆ. ದೇವಸ್ಥಾನವನ್ನು ತಲುಪುವುದು ನನ್ನ ಗುರಿಯಾಗಿದೆ. ನನ್ನ ಕಾಲುಗಳಲ್ಲಿ ತುಂಬಾ ಶಕ್ತಿಯಿದೆ, ಅವು ದಣಿಯುವುದಿಲ್ಲ, ನಿಲ್ಲುವುದಿಲ್ಲ. ನಾನೆಲ್ಲೂ ನಿಲ್ಲದೆ ನಿರಂತರವಾಗಿ ಚಲಿಸುತ್ತಿದ್ದೆ. ನಂತರ ನೈಸ್ಟ್‌ವೆಡ್ ಪ್ರದೇಶವನ್ನು ಪ್ರವೇಶಿಸಿ, ಕಾರ್ರೆಬ್ಯಾಕವಾಯ್ ರಸ್ತೆಗೆ ಬಂದೆ, ನಂತರ ಎರಡು ರಸ್ತೆ ದಾಟಿ ತಿರುವಿನಿಂದ ಸ್ಲೆಯೆಲ್ಸೆವಾಯ್ ರಸ್ತೆಗೆ ಬಂದೆ. ಬೆಳಿಗ್ಗೆ ಆರು ಗಂಟೆಗೆ ಒಬ್ಬ ಫ್ಲೋರಿಸ್ಟ್ ತನ್ನ ಅಂಗಡಿ ತೆರೆಯುವುದನ್ನು ನೋಡಿ, ಅಲ್ಲಿಂದ ತಾಜಾ ಹಣ್ಣುಗಳ ಒಂದು ಗೊಂಚಲನ್ನು ಖರೀದಿಸಿದೆ.

ಸ್ಲೆಯೆಲ್ಸೆವಾಯ್ ರಸ್ತೆಯಲ್ಲಿ ಒಂದೂವರೆ ಎರಡು ಕಿ.ಮೀ. ನಡೆದ ನಂತರ ದೇವಸ್ಥಾನದ ಪ್ರಾಂಗಣ ಕಾಣಿಸಿತು. ನಾನು ಎಲ್ಲಾ ಅಡ್ಡಿಗಳನ್ನು ದಾಟಿ ನನ್ನ ಗುರಿಯನ್ನು ತಲುಪಿದ್ದೇನೆ. ನಾನು ಸಂತಸದಿಂದ ‘ಹುರ್ರಾ ಹುರ್ರಾ’ ಎಂದು ಕುಣಿದೆ.

# ಡಾಕ್ಟರ್ ಸಾಹೇಬ್

## ರಾಮಮನೋಹರ ಲೋಹಿಯಾ ಜೀವನಯಾನ

ಭಾರತದ ರಾಜಕೀಯ ನಕಾಶೆಯಲ್ಲಿ ರಾಮಮನೋಹರ ಲೋಹಿಯಾ ಒಂದು ಮಿಂಚುಗೊಂಚಲು. ಅಗಾಧ ವಿದ್ವತ್ತು, ಪ್ರಖರ ವೈಚಾರಿಕತೆ, ನಿಷ್ಠುರ ಪ್ರಾಮಾಣಿಕತೆ ಹಾಗೂ ಶ್ರಮಿಕರ ತವಕತಲ್ಲಣಗಳಿಗೆ ಮಿಡಿಯುವ ಅಂತಃಕರಣದ ಲೋಹಿಯಾ ಅವರ ಭಾಗವಹಿಸುವಿಕೆಯೊಂದಿಗೆ ದೇಶದ ರಾಜಕಾರಣ ಹೊಸಹೊಳಪು ದಕ್ಕಿಸಿಕೊಂಡಿದ್ದು ಇತಿಹಾಸದ ಉಜ್ವಲ ಅಧ್ಯಾಯ. ಭಾರತದ ಈ ಶ್ರೇಷ್ಠ ಸಮಾಜವಾದಿ ಚಿಂತಕ–ನಾಯಕ, ಏಕಕಾಲಕ್ಕೆ ಮಹಾತ್ಮ ಗಾಂಧಿ ಅವರ ಅನುಯಾಯಿಯೂ ವಿಮರ್ಶಕನೂ ಆಗಿದ್ದುದು ವಿಶೇಷ. ಲೋಹಿಯಾ ಅವರ ಚಿಂತನೆಗಳು ‘ಗಾಂಧಿ ಜಗತ್ತಿನ ಪ್ರವೇಶಕ್ಕೊಂದು ಬೆಳಕಿಂಡಿ. ಈ ಅಪೂರ್ವ ದಾರ್ಶನಿಕನ ಜೀವನಯಾನದ ಅಪೂರ್ವ ಕಥನ ‘ಡಾಕ್ಟರ್ ಸಾಹೇಬ್’ ಲೋಹಿಯಾ ಅವರ ಚಿಂತನೆಗಳನ್ನು ಕನ್ನಡದಲ್ಲಿ ಸಂಕಲಿಸಿಕೊಟ್ಟಿರುವ **ನಟರಾಜ್ ಹುಳಿಯಾರ್** ಈಗ ‘ಸುಧಾ’ ಓದುಗರಿಗಾಗಿ ಡಾಕ್ಟರ್ ಸಾಹೇಬ್‌ರ ಜೀವನಕಥನ ಕಟ್ಟಿಕೊಡುತ್ತಿದ್ದಾರೆ.

**ಮುಂದಿನ ಸಂಚಿಕೆಯಿಂದ, ‘ಸುಧಾ’ ಓದುಗಬಳಗದೊಂದಿಗೆ**
**ಡಾಕ್ಟರ್ ಸಾಹೇಬ್**

